ಮಕ್ಕಳಿಗಾಗಿ ಬೈಬಲ್
ಅರ್ಪಿಸುವ



# ರೂಪವತಿಯಾದ ಎಸ್ತೇರ್ ರಾಣಿ

ಬರಹಗಾರರು: Edward Hughes

ಚಿತ್ರಲೇಖಕರು: Janie Forest

ಅಳವಡಿಸುವವರು: Ruth Klassen
Alastair Paterson
ಪದ್ಮಾ ಸೈಲೇಸ್: Vinay Shirol

ತಯಾರಕರು: Bible for Children
www.M1914.org

©2020 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಒಂದಾನೊಂದು ದಿನದಲ್ಲಿ ಎಸ್ತೇರಳೆಂಬ ಒಬ್ಬ ಸುಂದರವಾದ ಹುಡುಗಿಯಿದ್ದಳು. ಅವಳ ತಂದೆ ತಾಯಿ ತೀರಿ ಹೋದನಂತರ ಆಕೆಯ ಬಂಧುವಾದ ಮೊರ್ದೆಕೈ ಎಂಬುವವನು ಆಕೆಯನ್ನು ಬೆಳೆಸುತ್ತ ಬಂದನು.



ಎಸ್ತೇರಳು ಸಹ ಮೊರ್ದೆಕೈಗೆ ಒಳ್ಳೇ ವಿಧೇಯಳಾಗಿ ಆತನನ್ನು ಗೌರವಿಸಿದಳು.





ಎಸ್ತೇರಳು ಪಾರಸಿಯದಲ್ಲಿ ವಾಸವಾಗಿದ್ದಳು.
ಆದರೆ ಆಕೆ ಪಾರಸಿಯದವಳಾಗಿರಲಿಲ್ಲ.



ಆಕೆ ಯೆಹೂದ್ಯ ಳಾಗಿದ್ದಳು.
ಆಕೆಯ ಪೂರ್ವಿಕರು ಯುದ್ದದಲ್ಲಿ ಸೆರೆಯಾಳುಗಳಾಗಿ
ಪಾರಸಿಯಾಗೆ ಬಂದಿದ್ದರು. ಎಸ್ತೇರಳ ದಿನದಲ್ಲಿ
ಅನೇಕ ಯೆಹೂದ್ಯರು ಪಾರಸಿಯಲ್ಲಿ ವಾಸವಾಗಿದ್ದರು.



ಪಾರಸಿಯ
ರಾಜನು
ಎಲ್ಲಾ ದೇಶದ
ರಾಜಕುಮಾರಿಯ
ರಿಗೆ ಔತಣವನ್ನು
ಏರ್ಪಡಿಸಿದನು.



ರಾಣಿಯಾದ

ವಷ್ಟಿಯೊಂದಿಗೆ

ಭಾಗವಹಿಸಿದ

ಸ್ತ್ರೀಯರು

ಮಾತ್ರವಲ್ಲದೆ

ಅನೇಕ

ಪುರುಷರು ಸಹ

ಔತಣಕೂಟದಲ್ಲಿ

ಊಟ

ಮಾಡಿದರು.

ಪಾನಮತ್ತನಾದ ರಾಜನು ವಷ್ಟಿರಾಣಿಗೆ ರಾಜಮುಕುಟವನ್ನು ಧರಿಸಿಕೊಂಡು ರಾಣಿಯ ಸೌಂದರ್ಯವನ್ನು ತೋರಿಸುವುದಕ್ಕೆ ಅಜ್ಞಾಪಿಸಿದನು. ವಷ್ಟಿರಾಣಿಯು ಅದನ್ನು ತಿರಸ್ಕರಿಸಿದಳು.



ಸ್ತ್ರೀಯರು ಅವರ ಗಂಡಂದಿರನ್ನು ಮಾತನ್ನು ಗೌರವಿಸಬೇಕೆಂಬುದನ್ನು ತೋರಿಸಲು, ಅರಸನು ವಷ್ಟಿಯಿಂದ ರಾಜಮುಕುಟವನ್ನು ಹಿಂತೆಗೆದುಕೊಳ್ಳುವುದಕ್ಕೆ ರಾಜಾಜ್ಞೆಯನ್ನು ಹೊರಡಿಸಿ ಆಕೆಯನ್ನು ರಾಣಿಯ ಸ್ಥಾನದಿಂದ ತಗೆದನು.



ಹೊಸದಾದ
ರಾಣಿಯನ್ನು
ಮಾಡಲು ಹುಡುಕಾಟ
ಪ್ರಾರಂಭವಾಯಿತು. ರಾಜನ
ಸಂಸ್ಥಾನದಲ್ಲಿರುವ ಎಲ್ಲಾ
ಸುಂದರ ಹುಡುಗಿಯರಲ್ಲಿ
ರಾಜನು ಎಸ್ತೇರಳನ್ನು ತನ್ನ
ಹೆಂಡತಿಯನ್ನಾಗಿ ಆಯ್ಕೆ
ಮಾಡಿಕೊಂಡನು.



ರಾಜನು
ರಾಜಮುಕುಟವನ್ನು
ಆಕೆಯ ತಲೆಗೆ ಇರಿಸಿದನು.
ಎಸ್ತೇರಳು ತಾನು
ಯೆಹೂದ್ಯಳೆಂಬುದಾಗಿ
ರಾಜನಿಗೆ ಹೇಳಲಿಲ್ಲ.
ಯಾಕೆಂದರೆ ಆತನ ಬಂಧುವು
ಆ ವಿಷಯವನ್ನು
ತಿಳಿಸಬಾರದೆಂಬುದಾಗಿ
ಹೇಳಿದ್ದನು.





ಬಂಧುವಾದ ಮಾರ್ದಕೈ
ಎಸ್ತೇರಳ ವಿಷಯವಾದ
ವಾರ್ತೆಯನ್ನು
ಕೇಳಿಸಿಕೊಳ್ಳುವುದಕ್ಕಾಗಿ
ಅರಮನೆಯ
ಹೆಬ್ಬಾಗಲಿನಲ್ಲಿ ತನ್ನ
ಸಮಯವನ್ನು
ಕಳೆದನು.



ಒಂದು ದಿನ
ಅರಮನೆಯ ಇಬ್ಬರು
ಸೇವಕರು ರಾಜನನ್ನು
ಕೊಲ್ಲುವುದಕ್ಕಾಗಿ
ಉಪಾಯ
ಮಾಡುತ್ತಿದ್ದಾರೆಂಬುದಾಗಿ
ತಿಳಿಸಿದನು.

ಮೊರ್ದೆಕೈ ಅರಸನ ಪ್ರಾಣವನ್ನು ಉಳಿಸಬೇಕೆಂಬುದಾಗಿ (ಸೂಚನೆಯನ್ನು) ಎಚ್ಚರಿಕೆಯನ್ನು ಕಳುಹಿಸಿ ಅರಸನನ್ನು ಕಾಪಾಡಿದನು. ಸೇವಕರನ್ನು ಗಲ್ಲಿಗೇರಿಸಲಾಯಿತು. ಮತ್ತು ಮೊರ್ದೆಕೈನ ಹೆಸರು ರಾಜನ ದಿನಚರ್ಯೆ ಪುಸ್ತಕದಲ್ಲಿ ಬರೆಯಲ್ಪಟ್ಟಿತು.



ಹಾಮಾನನು ರಾಜನಿಗೆ ಎರಡನೆಯ ಪ್ರಾಮುಖ್ಯ ವ್ಯಕ್ತಿಯಾಗಿದ್ದು, ಈತನು ಶ್ರೀಮಂತನಾಗಿದ್ದನು. ಈತನು ಹಾದು ಹೋಗುವಾಗ ಪ್ರತಿಯೊಬ್ಬರು ಸಾಷ್ಟಾಂಗ ಬೀಳಬೇಕು.



ಒಬ್ಬನನ್ನೂ ಬಿಟ್ಟು ಎಲ್ಲರೂ ಅಡ್ಡಬಿದ್ದರು. ಯೆಹೂದ್ಯನಾದ ಮೊರ್ದೆಕೈ ಜೀವಿಸುವ ದೇವರನ್ನು ಮಾತ್ರವೇ ಆರಾಧನೆ ಮಾಡುತ್ತಿದ್ದನು.



ಹಾಮಾನನು ಮೊರ್ದೆಕೈಯನ್ನು ಬಹಳವಾಗಿ ಹಗೆ ಮಾಡಿದನು. ಆತನನ್ನು ಪಾರಸಿಯದ ಎಲ್ಲಾ ಯೆಹೂದ್ಯರನ್ನು ಕೊಲ್ಲಬೇಕೆಂಬುದಾಗಿ ತೀರ್ಮಾನಿಸಿದನು.

ಎಂಥಾ ಭಯಂಕರ!



ಕೆಟ್ಟವನಾದ ಹಾಮಾನನು ನಿಶ್ಚಿತವಾದ ಸಮಯದಲ್ಲಿ
ದೇಶದಲ್ಲಿರುವ ಎಲ್ಲಾ ಯೆಹೂದ್ಯರು
ಕೊಲ್ಲಲ್ಪಡಬೇಕೆಂದು ತೀರ್ಮಾನಿಸಿ
ಕುಯುಕ್ತಿಯಿಂದ ಶಾಸನಕ್ಕೆ
ಅರಸನಿಂದ ರುಜು
ಮಾಡಿಸಿಕೊಂಡನು.





ಇದು
ಭಯಂಕರವಾದ
ಶಾಸನವಾಗಿತ್ತು.
ಯೆಹೂದ್ಯರು ಹಾಗೂ
ಪಾರಸಿಯರು ದು:ಖಿಸಿದರು.
ಆದರೆ ನೆನಪಿರಲಿ, ದೇವರು
ಎಸ್ತೇರಳನ್ನು ರಾಣಿಯನ್ನಾಗಿ
ಮಾಡಿದನು.



ಆಕೆಯು

ಯೆಹೂದದ

ಶ್ರದ್ಧಾಳುವಾಗಿದ್ದಳು. ಆಕೆ

ತನ್ನ ರಹಸ್ಯವನ್ನು ರಾಜನಿಂದ

ಮುಚ್ಚಿಟ್ಟಳಾ? ಅಥವಾ ತನ್ನ

ಜನರನ್ನು ಕಾಪಾಡಲು ತನ್ನ

ಪ್ರಾಣವನ್ನಾದರೂ ಒತ್ತೆಯಿಡಲು

ಪ್ರಯತ್ನಿಸಿದಳಾ?

ದೇವರು ಎಸ್ತೇರಳಿಗೆ ಒಂದು ಒಳ್ಳೇಯ ಜಾಣತನದ ಉಪಾಯವನ್ನು ಕೊಟ್ಟನು. ಆಕೆ ಅರಸನನ್ನು ಹಾಗೂ ಹಾಮಾನನ್ನು ಔತಣಕೂಟಕ್ಕೆ ಆಹ್ವಾನಿಸಿದಳು. ರಾಜನು ಆಕೆ ಏನೂ ಕೇಳಿದರೂ ಅದನ್ನು ಕೊಡುತ್ತೇನೆಂದು ಭರವಸೆಯನ್ನು ಕೊಟ್ಟನು.



“ನಾಳೆಯು ಸಹ ಅರಸನು ಹಾಗೂ ಹಾಮಾನನು ಔತಣಕೂಟಕ್ಕೆ ಬರಲಿ” ಎಂದು ಎಸ್ತೇರಳು ಉತ್ತರಿಸಿದಳು. ನಂತರ ತನಗೆ ಏನು ಬೇಕೋ ಅದನ್ನು ರಾಜನಿಗೆ ಕೇಳಬೇಕೆಂದುಕೊಂಡಳು.



ಅಷ್ಟರೊಳಗೆ ಹಾಮಾನನು ಮೊರ್ದೆಕೈಯನ್ನು ನೇಣು ಹಾಕಲು ಒಂದು ದೊಡ್ಡ ಗಲ್ಲು ಕಂಬವನ್ನು ಸಿದ್ದಪಡಿಸಿದನು.





ಆ ರಾಜನು ಆ ರಾತ್ರಿಯಲ್ಲಿ ನಿದ್ರೆ ಮಾಡಲಿಲ್ಲ. ಆತನು ನ್ಯಾಯಸ್ಥಾನದ ದಾಖಲೆಗಳನ್ನು ಓದುತ್ತಿರುವಾಗ ಮೊರ್ದೆಕೈಯು ತನ್ನ ಪ್ರಾಣವನ್ನು ಉಳಿಸಿದ್ದಕ್ಕೆ ಆತನನ್ನು ಸನ್ಮಾನಿಸಿರಲಿಲ್ಲ

ಎಂಬ ವರ್ತಮಾನವನ್ನು ನೋಡಿದನು.

ಮರುದಿನ ರಾಜನು ಹಾಮಾನನ್ನು ಕೇಳಿದನು. 'ರಾಜನು ಸನ್ಮಾನಿಸಲು ಇಷ್ಟಪಡುವಂಥ ಮನುಷ್ಯನಿಗೆ ಮಾಡತಕ್ಕದ್ದೇನು'? ಎಂದು ಕೇಳಿದನು. ರಾಜನು ತನ್ನನ್ನು ರ್ಥಮಾಡಿಕೊಂಡಿದ್ದಾನೆಂಬುದಾಗಿ ತಿಳಿದು ಹಾಮಾನನು ಸಂತೋಷಿಸಿದನು.





ಹಾಮಾನನು ಮೊರ್ದೆಕೈಯನ್ನು ಗಲ್ಲಿಗೇರಿಸಲು ರಾಜನ ಅಪ್ಪಣೆಯನ್ನು ಕೇಳಲು ಬಂದನು. ಅದಾಗಲೇ ಗಲ್ಲು ಸಿದ್ಧ ಮಾಡಲ್ಪಟ್ಟಿತ್ತು.



ಅದಕ್ಕಾಗಿ ಕಾಯಬೇಕಾಯಿತು.
“ಆ ಮನುಷ್ಯನಿಗೆ ರಾಜ ವಸ್ತ್ರಗಳನ್ನು,
ಕಿರೀಟವನ್ನು ಧರಿಸಿರಿ” ಎಂದು ಹಾಮಾನನು
ತನ್ನ ಸಲಹೆಗಳನ್ನು ರಾಜನ ಮುಂದಿಟ್ಟನು.



ರಾಜನು ಹಾಮಾನನಿಗೆ ಮೊರ್ದೆಕೈಯನ್ನು ರಾಜನ ಕುದುರೆಯ ಮೇಲೆ ಕುಳ್ಳಿರಿಸಿ ಎಲ್ಲಾ ಜನರು ನೋಡುವ ಮೆರವಣಿಗೆ ಮಾಡಿಸಿರಿ, ಯೆಹೂದ್ಯನಾದ ಮೊರ್ದೆಕೈಗೆ ಹೀಗೆ ಮಾಡಿರಿ ಎಂಬುದಾಗಿ ಹಾಮಾನನಿಗೆ ಅಜ್ಞಾಪಿಸಿ ಅವಸರ ಮಾಡಿಸಿದನು.



ಹಾಮಾನನು ಮೊರ್ದೆಕೈಯನ್ನು ಗೌರವಿಸಿ
ಪಟ್ಟಣದ ಮಧ್ಯದಲ್ಲಿ ಮೆರವಣಿಗೆ
ಮಾಡಿಸಿದ ವಿಷಯದಲ್ಲಿ ನೀವು ಏನು
ಆಲೋಚಿಸುತ್ತೀರಿ,
...



... ಈಗ ಹಾಮಾನನು ಮೊರ್ದೆಕೈಯನ್ನು ಮೊದಲಿಗಿಂತಲೂ ಹೆಚ್ಚಾಗಿ ಹಗೆ ಮಾಡಿದನು. ಹಾಮಾನನು “ಸ್ವಲ್ಪ ತಡೆಯಿರಿ, ...



... ಆತನು ಬೇಗನೆ ತನ್ನ ಎಲ್ಲಾ ಯೆಹೂದ್ಯರೊಂದಿಗೆ ಸಾಯುತ್ತಾನೆಂಬುದಾಗಿ” ಆಲೋಚಿಸಿರಬಹುದು.



ನಂತರದ ದಿನಗಳಲ್ಲಿ
ಅರಸನು ಹಾಮಾನನೊಂದಿಗೆ
ಎಸ್ತೇರಳ ಔತಣಕ್ಕೆ ಬಂದರು.
‘ನಿನ್ನ ವಿಜ್ಞಾಪನೆ ಏನು’?
ಎಂದು ರಾಜನು ಕೇಳಿದನು,
ತಾನು ಕೊಟ್ಟ ಮಾತನ್ನು
ಮರೆತಿರಯಲಿಲ್ಲ.



ರಾಣಿಯಾದ ಎಸ್ತೇರಳು ಹಾಮಾನನ್ನು ಸೂಚಿಸಿ ಅವನ ಎಲ್ಲಾ ಕೆಟ್ಟ ತಂತ್ರಗಳನ್ನು ಅರಸನಿಗೆ ತಿಳಿಸಿದಳು. ರಾಜನು ಆತನನ್ನು ‘ಗಲ್ಲಿಗೇರಿಸಿರಿ’ ಎಂದು ಆಜ್ಞಾಪಿಸಿದನು.



ನಂತರ ಅರಸನು ಎಲ್ಲಾ ಯೆಹೂದ್ಯರು ತಮ್ಮನ್ನು ತಾವು ರಕ್ಷಿಸಿಕೊಳ್ಳಿರಿ ಎಂಬುದಾಗಿ ಶಾಸನವನ್ನು ಹೊರಡಿಸಿದನು. ಅವರು ಕಾಪಾಡಲ್ಪಟ್ಟರು.

ಮೊರ್ದೆಕೈಯು ರಾಜನಿಗೆ ಎರಡನೆಯ ಪ್ರಾಮುಖ್ಯ ವ್ಯಕ್ತಿಯಾದನು.



ಮತ್ತು ಎಲ್ಲಾ ಯೆಹೂದ್ಯರು ಸಂತೋಷಿಸಿ ಒಬ್ಬರಿಗೊಬ್ಬರು ಉಡುಗೋರೆಗಳನ್ನು ವಿನಿಮಯಮಾಡಿಕೊಂಡರು.



ಈ ದಿನದವರೆಗೂ ದೇವರು ರೂಪವತಿಯಾದ ಎಸ್ತೇರ್ ರಾಣಿಯು ಮುಖಾಂತರ ಅವರನ್ನು ಯಾವ ರೀತಿಯಲ್ಲಿ ಕಾಪಾಡಿದನು ಎಂಬುದಾಗಿ ಯೆಹೂದ್ಯ ಜನರು ನೆನಪು ಮಾಡಿಕೊಳ್ಳುತ್ತಾರೆ.



ರೂಪವತಿಯಾದ ಎಸ್ತೇರ್ ರಾಣಿ

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಎಸ್ತೇರ್

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”
ಕೀರ್ತನೆ 119:130

ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು
ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ
ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು
ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು
ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು
ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ
ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು
ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ
ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು.
ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ
ದೇವರೊಂದಿಗೆ ಮಾತಾಡು!
ಯೋಹಾನ 3:16